<u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ..... ಚಿತ್ತಾಪೂರ</u>

C.C No. 168/2017
CW-20 PW-13

ಹೆಸರು : ಪ್ರಭು.ಡಿ.ಟಿ.

ತಂದೆ ಹೆಸರು : ದೇವಪ್ಪ

ವಯಸ್ಸು : 51 ವರ್ಷ

ಉದ್ಯೋಗ : ಡಿ.ವೈ.ಎಸ್.ಪಿ. ಉಡುಪಿ.

ವಾಸ ಸ್ಥಳ : ಉಡುಪಿ.

---

**<u>ಪ್ರಮಾಣವಚನ ಭೋಧಿಸಲಾಯಿತು. ದಿಃ 17-02-2025</u>**

<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರಿಂದ</u>

ನಾನು 2005 ರಿಂದ 2007ರ ವರೆಗೆ ಚಿತ್ತಾಪೂರ ಪೊಲೀಸ ಠಾಣೆಯಲ್ಲಿ ಉಪನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ: 27-09-2005ರಂದು ಮಧ್ಯಾಹ್ನ 2-30ರ ಸಮಯದಲ್ಲಿ ಚಾಸಾ-1ರವರು ಠಾಣೆಗೆ ಹಾಜರಾಗಿ ಒಂದು ಬೆರಳಚ್ಚು ಮಾಡಿದ ದೂರನ್ನು ನೀಡಿದ್ದು, ಸದರಿ ದೂರಿನ ಆಧಾರದ ಮೇರೆಗೆ ನಾನು ಒಂದು ಪ್ರಥಮ ವರ್ತಮಾನ ವರದಿಯನ್ನು ತಯ್ಯಾರಿಸಿ, ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

ದಿನಾಂಕ: 09-11-2005ರಂದು ಪ್ರಕರಣದ ಆರೋಪಿಯಾದ ಗೋಪಾಲ ಈತನನ್ನು ದಸ್ತಗಿರಿ ಮಾಡಿರುತ್ತೇನೆ. ನಂತರ ಅದೇ ದಿನ ಚಾಸಾ-9 ಮತ್ತು ಚಾಸಾ-10ರವರನ್ನು ಬರಮಾಡಿಕೊಂಡು ಆರೋಪಿಯ ಕೈ-ಬರಹವನ್ನು ಪಡೆದುಕೊಂಡು ಪಂಚನಾಮೆ ಕ್ರಮವನ್ನು ನಿಶಾನೆ ಪಿ-8ರಂತೆ ಜರುಗಿಸಿರುತ್ತೇನೆ. ನಂತರ ಆರೋಪಿಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ. ನಾನು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸುತ್ತೇನೆ.

ದಿನಾಂಕ: 02-03-2006ರಂದು ಸಾಕ್ಷಿದಾರರಾದ ಚಾಸಾ-6 ರಿಂದ ಚಾಸಾ-8ರವರ ಹೇಳಿಕೆಗಳನ್ನು ಪಡೆದುಕೊಂಡು ಕಡತಕ್ಕೆ ಅಳವಡಸಿಕೊಂಡಿರುತ್ತೇನೆ. ಅದೇ ದಿನ ಚಾಸಾ-1ರವರು ತೋರಿಸಿದ ಅಪರಿಪೂರ್ಣಗೊಂಡ ಕಾಮಗಾರಿ ಸ್ಥಳದ ಕಮರವಾಡಿ ಗ್ರಾಮದ ಹಿರಿಯ ಪ್ರಾಥಮಿಕ ಶಾಲೆ ಹತ್ತಿರ ಹಾಜರಾಗಿ ಅಂಬೇಡ್ಕರ ಭವನದ ಕಟ್ಟಡದ ಕಾಮಗಾರಿಯನ್ನು ಪರಿಶೀಲಿಸಿ, ಚಾಸಾ-11 ಮತ್ತು ಚಾಸಾ-12ರವರ ಸಮಕ್ಷಮ ಒಂದು ಪಂಚನಾಮೆ ಕ್ರಮವನ್ನು ಜರುಗಿಸಿರುತ್ತೇನೆ. ನಂತರ ಅದೇ ಆಲೂರ ಗ್ರಾಮಕ್ಕೆ ಭೇಟಿ ನೀಡಿ

ಅಪರಿಪೂರ್ಣಗೊಂಡ ಗೋ-ಕಟ್ಟೆಯನ್ನು ಪರಿಶೀಲಿಸಿ, ಚಾಸಾ-13 ಮತ್ತು ಚಾಸಾ-14ರವರ ಸಮಕ್ಷಮ ಒಂದು ಪಂಚನಾಮೆ ಕ್ರಮವನ್ನು ಜರುಗಿಸಿರುತ್ತೆನೆ. ಅದೇ ದಿನ ಬೊಮ್ಮನಹಳ್ಳಿ ಗ್ರಾಮಕ್ಕೆ ಭೇಟಿ ನೀಡಿ ತಡೆಗೋಡೆ ನಿರ್ಮಾಣ ಕಾಮಗಾರಿಯನ್ನು ಪರಿಶೀಲಿಸಿ, ಚಾಸಾ-15 ಮತ್ತು ಚಾಸಾ-16ರವರ ಸಮಕ್ಷಮ ಒಂದು ಪಂಚನಾಮೆ ಕ್ರಮವನ್ನು ಜರುಗಿಸಿರುತ್ತೇನೆ.

ದಿನಾಂಕ: 03-03-2006ರಂದು ಚಾಸಾ-1ರವರು ಹಾಜರುಪಡಿಸಿದ 9 ದಾಖಲಾತಿಗಳನ್ನು ಚಾಸಾ-9 ಮತ್ತು ಚಾಸಾ-10ರವರ ಸಮಕ್ಷಮ ನಿಶಾನೆ ಪಿ-6ರಂತೆ ಜರುಗಿಸಿ, ಸದರಿ 9 ದಾಖಲಾತಿಗಳನ್ನು ಅಮಾನತ್ತುಪಡಿಸಿಕೊಂಡಿರುತ್ತೇನೆ. ಅಮಾನತ್ತುಪಡಿಸಿಕೊಂಡ ದಾಖಲಾತಿಗಳ ಬಗ್ಗೆ ಮಾಲುಪಟ್ಟಿ ತಯ್ಯಾರಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

ದಿನಾಂಕ: 07-04-2006ರಂದು ಚಾಸಾ-3ರವರ ಹೇಳಿಕೆಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

ದಿನಾಂಕ: 19-04-2006ರಂದು ಚಾಸಾ-4ರವರ ಹೇಳಿಕೆ, ದಿನಾಂಕ: 25-05-2006ರಂದು ಚಾಸಾ-5 ರವರ ಹೇಳಿಕೆ, ದಿನಾಂಕ: 27-05-2006ರಂದು ಚಾಸಾ-2ರವರ ಹೇಳಿಕೆಗಳನ್ನು ಪಡೆದುಕೊಂಡು ಕಡತಕ್ಕೆ ಅಳವಡಸಿಕೊಂಡಿರುತ್ತೇನೆ. ನಂತರ ಆರೋಪಿಯ ಸೇವಾ ಪುಸ್ತಕದ ನಕಲು ಪ್ರತಿಯನ್ನು ಪಡೆದುಕೊಂಡು ಸದರಿ ಸೇವಾ ಪುಸ್ತಕವನ್ನು ಪರಿಶೀಲನೆ ಮಾಡಿರುತ್ತೇನೆ.

ಜಪ್ತಿ ಮಾಡಿಕೊಂಡ ಮುದ್ದೆಮಾಲಿನಲ್ಲಿರುವ ಸಹಿ ಹಾಗೂ ಆರೋಪಿಯ ಸಹಿಯನ್ನು ತಾಳೆ ಮಾಡಲು ಚಾಸಾ-17ರವರ ಮುಖಾಂತರ ಸದರಿ ದಾಖಲಾತಿಗಳನ್ನು ಬೆಂಗಳೂರಿನ ವಿಧಿ ವಿಜ್ಞಾನ ಕೇಂದ್ರಕ್ಕೆ ಕಳುಹಿಸಿಕೊಟ್ಟಿರುತ್ತೇನೆ. ನಂತರ ನಾನು ಈ ಪ್ರಕರಣದ ಕಡತವನ್ನು ಎ.ಎಸ್.ಐ. ರುಕ್ಕಪ್ಪ ಅವರಿಗೆ ನಾನು ವರ್ಗಾವಣೆಯಾಗಿದ್ದರಿಂದ ಹಸ್ತಾಂತರಿಸಿರುತ್ತೇನೆ.

ಸಾಕ್ಷಿಯು ನಿಶಾನೆ ಪಿ-1 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ-1(ಬಿ) ಎಂದು, ನಿಶಾನೆ ಪಿ-2 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ-2(ಎ) ಎಂದು, ನಿಶಾನೆ ಪಿ-3ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ-3(ಬಿ) ಎಂದು, ನಿಶಾನೆ ಪಿ-4 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ-4(ಸಿ) ಎಂದು, ನಿಶಾನೆ ಪಿ-5 ರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ-5(ಸಿ) ಎಂದು, ನಿಶಾನೆ ಪಿ-6

ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ-6(ಬಿ) ಎಂದು, ನಿಶಾನೆ ಪಿ-7ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ-7(ಬಿ) ಎಂದು, ನಿಶಾನೆ ಪಿ-8 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ-8(ಬಿ) ಎಂದು, ಪ್ರಥಮ ವರ್ತಮಾನ ವರದಿಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ-9 ಎಂದು, ಸಹಿಯನ್ನು ನಿಶಾನೆ ಪಿ-9(ಎ) ಎಂದು, ಚಾಸಾ-3 ರವರ ಹೇಳಿಕೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ನಿಶಾನೆ ಪಿ-10 ಎಂದು, ಸಹಿಯನ್ನು ನಿಶಾನೆ ಪಿ-10(ಎ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಹಾಯಕ ಸರಕಾರಿ ಅಭಿಯೋಜಕರು ಮುದ್ದೆಮಾಲುಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸದೇ ಇರುವುದರಿಂದ ಮುಂದುವರೆದ ಮುಖ್ಯವಿಚಾರಣೆಗೆ ಕಾಲಾವಕಾಶ ಕೇಳಿದ್ದು, ಕಾಲಾವಕಾಶ ನೀಡಲಾಯಿತು).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓ. ಹೇ ಕೇ.ಸರಿ ಇದೆ.

ಸಿವಿಲ್ & J.M.F.C ನ್ಯಾಯಾಧೀಶರು, ಚಿತ್ತಾಪೂರ.